ಶ್ರೀ. ಎಚ್. ಎನ್. ನಂಜೇಗೌಡ.—ಅನೇಕ ಕಡೆಗಳಲ್ಲಿ ಈಗಾಗಲೇ ರಿಪೇರಿ ಕಾಮಗಾರಿ ನಡೆಯುತ್ತಿವೆ. ಆದ್ದರಿಂದ ಮೂನ್ಯ ಸದಸ್ಯರ ಬಾಕಿ ಪ್ರಶ್ನೆಗಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ.

REPAIRS TO TANKS OF ANKOLA TALUK

929. SMT. RADHA BHAT (Ankola).—

Will the Minister for Community Development and Social Welfare be pleased to state :—

The number of tanks repaired by the Ankola Taluk Development Board of North Kanara District since last two years and the expenditure incurred thereon ?

SRI M. MALLIKARJUNA SWAMY—(Minister for Community Developments and Social Welfare.)

The Ankola Taluk Development Board has not spent any amount from its fund for repairing the tanks during 1971-72 and 1972-73. Out of 18 tanks proposed to be taken up for repairs from 44 INED funds during 1971-72 repair works in respect of 8 tanks costing Rs. 3,500 have been completed during 1972-73.

ಶ್ರೀಮತಿ ರಾಧಾ ಭಟ್.—ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ಅವರ ನಿಧಿಯಿಂದ ಹಣವನ್ನು ಖರ್ಚು ಮಾಡಿಲ್ಲ ಎಂದು ಹೇಳಲಾಗಿದೆ. ಅಂದರೆ ಅವರಲ್ಲಿ ಹಣವಿರಲಿಲ್ಲವೇ ? ಆಥವಾ ಇದ್ದರೂ ಅವರು ಖರ್ಚು ಮಾಡಲಿಲ್ಲವೋ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇಲ್ಲಿ ತಾಲ್ಲೂಕು ಬೋರ್ಡಿನವರು ಕಳೆದ 2 ವರ್ಷಗಳಲ್ಲಿ 35 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಅವರ ಹಣದಲ್ಲಿ ಮೂರು ಸಾವಿರ ರೂಪಾಯಿಗಳನ್ನು ಈ ಕೆರೆ ಮತ್ತು ಬಂಡಾರಗಳ ರಿಪೇರಿಗಾಗಿ ಖರ್ಚು ಮಾಡಿದ್ದಾರೆ.

ಶ್ರೀಮತಿ ರಾಧಾ ಭಟ್.—ಈ ಐನ್. ಇ. ಡಿ. ನಿಧಿಯಿಂದ 18 ಕೆರೆಗಳನ್ನು ದುರಸ್ತಿ ಮಾಡಬೇಕೆಂದು ತೀರ್ಮಾನವಾಗಿದ್ದರೂ ಇಲ್ಲಿ ಏಕೆ 8 ಕೆರೆಗಳನ್ನು ಮಾತ್ರ ರಿಪೇರಿ ಮಾಡಿ ಇನ್ನು 10 ಕೆರೆಗಳ ಕೆಲಸವನ್ನು ಹಾಗೆ ಕೈಬಿಟ್ಟಿದ್ದಾರೆ?

ಶ್ರೀ. ಎಂ. ಮಲ್ಲಿಕಾರ್ಜುನ ಸ್ವಾಮಿ.—ಆದಕ್ಕೆ ಕಾರಣ ಹಣದ ಅಭಾವ.

ಶ್ರೀಮತಿ ರಾಧಾ ಭಟ್.—ಈ ಕೆರೆಗಳನ್ನು ಇನ್ನಾದರೂ ಬೇಗ ದುರಸ್ತಿ ಮಾಡಿಸಿ ಕೊಡುತ್ತೀರಾ ?

ಶ್ರೀ. ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಲ್ಲಿ ಈಗಾಗಲೇ ಕೈಗೊಂಡಿರ ತಕ್ಕ ಕರಿ ಮತ್ತು ಬಂಡಾರಗಳ ಕೆಲಸ ಪೂರ್ತಿಯಾದ ಮೇಲೆ ಉಳಿದ ಕರೆಗಳ ಕೆಲಸವನ್ನೂ ತೆಗೆದುಕೊಳ್ಳಲೇಬೇಕು–ತೆಗೆದುಕೊಳ್ಳುತ್ತೇವೆ. ಆದಷ್ಟು ಜಾಗ್ರತೆ ಅವುಗಳನ್ನೂ ರಿಪೇರಿ ಮಾಡಿಸಿ ಕೊಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

ಶ್ರೀ ಜಿ. ಪುಟ್ಟಸ್ವಾಮಿ.—ಅವರು ತಮ್ಮ ಗಮನ ಸೆಳೆಯತಕ್ಕ ಮೋಷನ್ನನ್ನು ಮಂಡಿಸಬಹುದು.

QUESTIONS FOR ANSWERS ON THE DAY
(BUT NOT TAKEN UP)

MISUSE OF PANCHAYAT FUND BY CHAIRMAN OF MARCHANAHALLY GROUP VILLAGE PANCHAYAT, CHANNAPATNA TALUK

538 SRI T. V. KRISHNAPPA (Channapatna).—

Will the Minister for Community Development and Social Welfare be pleased to state :—

(*a*) the name of the Chairman of Marchanahally Group Village Panchayat, Channapatna Taluk;

(*b*) whether the Government is aware that the above Chairman is indulging in mis-use and misappropriation of Panchayat funds and collecting monies from Harijans on the plea of distribution of lands (acquired) to Harijans and further indulging in falsification of records;

(*c*) if so, the action the Government proposes to take against the above Chairman ?